ಪದಬಂಧ



ಎಡದಿಂದ ಬಲಕ್ಕೆ

1. ಮುಂದಕ್ಕೇನು ಗತಿ? ಇದು ಗಂಗೆಯ ಉಪನದಿ (4)
3. ಕೊರಟಗೆರೆಯಿಂದ ಬಂದವನ ಶಿರಕ್ಕೆ ರಾಜಾಲಂಕರಣ (3)
4. ಇನ್ನೂ ಸಿಕ್ಕಲಿಲ್ಲವೇ ಆ ರೋಗ ನಿರೋಧಕ ಮದ್ದು? (3)
6. ಪೊರಕೆಯನ್ನು ಹಿಡಿದ ಶರೀರ ಬೇರೆಯವರದ್ದು? (3)
7. ನಕಲು ಗೊತ್ತಲ್ಲ? ಅವನದೂ ಮನುಷ್ಯ ಜಾತಿಯೇ ತಾನೇ? (4)
8. ಮೆತ್ತಗಿದ್ದರೇನು, ಆತ ಓಟು ಹಾಕುವವ ಗೊತ್ತೇ? (4)
10. ಹತ್ತೂ ಜನ ಬಂಧುಗಳ ವಿರಸ ಕೊನೆಗೂ ಹಿಡಿತಕ್ಕೆ ಬಂದಿದೆ (4)
12. ವ್ಯಾಪಾರಿಯೊಡನೆ ಮಿತ್ರತ್ವ ವಿಪರೀತ ಏನಿಲ್ಲ (4)
14. ಮುನಿದವರನ್ನು ರಂಜಿಸಲು ಈ ಎಲ್ಲ ಸಾಮಗ್ರಿ (4)
16. ಭಾರೀ ಹೊರೆಯನ್ನು ಕಂಡೊಡನೆ ಯೌವನವೂ ಹಿಂದು ಮುಂದು (3)
17. ನಿರ್ಗಮಿಸಬೇಡಿ. ಇಲ್ಲಿನ ಪ್ರಕೃತಿಯನ್ನು ನೋಡಿ (3)
18. ನಪಾಸಾದವನ ಹೆಸರನ್ನು ಸ್ಮರಣೆಗೆ ತರಿಸು (4)

ಮೇಲಿಂದ ಕೆಳಕ್ಕೆ

1. ಮಠದ ಪಕ್ಕದಲ್ಲೇ ಸುಂದರ ಸಭಾ ಸ್ಥಾನ (3)
2. ನ್ಯಾಯಾಲಯದ ಬಳಿಯಲ್ಲೇ ವಾಸಿಸಲು ತಕ್ಕ ಮನೆ (3)
3. ಕೊರಳು ಸರಿಪಡಿಸುತ್ತೇನೆಂದು ಬರೀ ಕಾಟ (4)
5. ಆತನೇ ಕೇಳಿಸಿಕೊಂಡಿದ್ದು ಕುದುರೆಯ ಕೂಗು (3)
7. ಎಲ್ಲರೂ ಮಾಡುವಂತಲ್ಲ, ಆತ ತುಂಬ ಸಂಪ್ರದಾಯಸ್ಥ (4)
9. ಕಾರನ್ನು ಮಾರಿದವನ ಹೆಸರು ಲಕ್ಷ್ಮೀಪತಿ ಸಮಾನಾರ್ಥ (4)
11. ವಿಪರೀತ ಬಡ್ಡಿ ಹಾಕಿದರೆಂದು ದಂಗೆ ಎದ್ದರೇ? (3)
13. ಗರ್ವ ತೋರಿದರೆ ಶತ್ರುಗಳ ಗುಂಪೇ ಸಿದ್ಧ (4)
14. ಹೊಸದೇನನ್ನೇ ಕೊಳ್ಳುವಾಗಲೂ ತಾಳ್ಮೆ ಇರಲಿ (3)
15. ಸರಿಯಾಗಿ ನಮಿಸಲಿಲ್ಲವೆಂದು ಕೋಪವೇ? (3)

## 12-2-15ರ ಉತ್ತರಗಳು

ಎಡದಿಂದ ಬಲಕ್ಕೆ

1. ಉದ್ದೇಶ; 3. ಸಂಚಾರ; 4. ಮಸ್ತಕ; 6. ಮನೋಹರ; 7. ಕಾಲುಭಾಗ; 9. ರಣತಂತ್ರ; 11. ಫಲಹಾರ (= ಫಲಾಹಾರ); 15. ಲಡಾಯಿ; 16. ಲಾಲಸ; 17. ಸುರೂಪ

ಮೇಲಿಂದ ಕೆಳಕ್ಕೆ

1. ಉರಗ; 2. ಶಮನ; 3. ಸಂಗ್ರಹ; 5. ಕಮಾಲು; 6. ಮತ್ಸರ; | 8. ಗಟಾರ; 10. ತಂಬೂಲ (= ತಾಂಬೂಲ); 12. ಲಕಾಸ (ಸಕಾಲ ಬುಡಮೇಲು); 13. ಜಮೀನು; 14. ವಿಲಾಪ

## ಪ್ರಶ್ನಾಂಕಣ

# ಪ್ರಾಣಿ ವಿಷ ಏನೇನು ಅಂಕಿ ಅಂಶ?

* ಧರೆಯ ಜೀವಜಾಲದಲ್ಲಿ ಈವರೆಗೆ ಗುರುತಿಸಿ ಹೆಸರಿಸಲಾಗಿರುವ ಪ್ರಾಣಿಗಳ ಎಲ್ಲ ಪ್ರಭೇದಗಳು ಅಜ್ಞಾತವಾಗಿ ಅಸ್ತಿತ್ವದಲ್ಲಿವೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಈಗ ತಿಳಿದಿರುವ ಪ್ರಾಣಿ ಪ್ರಭೇದಗಳಲ್ಲಿ ಸುಮಾರು ಒಂದು ಲಕ್ಷ ಪ್ರಭೇದಗಳು ವಿಷಯುಕ್ತವಾಗಿವೆ. ತಮ್ಮ ಶರೀರದಲ್ಲೇ ವಿಷವನ್ನು ಉತ್ಪಾದಿಸುವ, ಅದನ್ನು ಶೇಖರಿಸುವ ಮತ್ತು ಅವಶ್ಯವಾದಾಗ ಹೊರಹಾಕುವ ವಿಶಿಷ್ಟ ವ್ಯವಸ್ಥೆಗಳನ್ನು ಈ ಪ್ರಾಣಿಗಳು ಪಡೆದಿವೆ. ವಿಸ್ಮಯ ಏನೆಂದರೆ ಪ್ರಾಣಿ ವಿಷಗಳ ರಾಸಾಯನಿಕ ಸಂಯೋಜನೆ ಪ್ರಭೇದದಿಂದ ಪ್ರಭೇದಕ್ಕೆ ಭಿನ್ನ ಭಿನ್ನ – ಅಷ್ಟೇ ಅಲ್ಲದೆ ಒಂದೇ ಪ್ರಭೇದದಲ್ಲೂ ಪ್ರದೇಶದಿಂದ ಪ್ರದೇಶಕ್ಕೆ, ವಯಸ್ಕರಿಂದ ಮರಿಗಳವರೆಗೆ ಉತ್ಪಾದನೆಗೊಳ್ಳುವ ವಿಷ ಸ್ವರೂಪವೂ ಕೂಡ ಬೇರೆ ಬೇರೆ! ಹಾಗಾಗಿ ವಿಷ ಪ್ರಾಣಿ ಪ್ರಭೇದಗಳು ಒಂದು ಲಕ್ಷದಷ್ಟಿದ್ದರೂ ಪ್ರಾಣಿ ಮೂಲ ವಿಷಗಳು ಇಪ್ಪತ್ತು ದಶಲಕ್ಷದಷ್ಟಿವೆ! ಈ ಪೈಕಿ ಸುಸ್ಪಷ್ಟ ಸ್ವರೂಪ ತಿಳಿದಿರುವ ವಿಷಗಳ ಸಂಖ್ಯೆ ಹತ್ತು ಸಾವಿರ ಮಾತ್ರ!

ಸ್ಪಷ್ಟವಾಗಿಯೇ ಎಲ್ಲ ಪ್ರಾಣಿ ವಿಷಗಳೂ ಪ್ರಾಣಾಂತಿಕವಲ್ಲ. ಇರುವೆ ಜೇನ್ನೊಣಗಳಲ್ಲಿರುವಂತೆ ಸ್ವರಕ್ಷಣೆಗೆ ಅಥವಾ ಸರ್ಪಗಳಲ್ಲಿರುವಂತೆ ಬಲಿಯನ್ನು ನಿಶ್ಚೇತನಗೊಳಿಸಲು ಈ ವಿಷಗಳ ಬಳಕೆ. ಅದೇನೇ ಇದ್ದರೂ 'ವಿಶ್ವ ಆರೋಗ್ಯ ಸಂಸ್ಥೆ'ಯ ಪ್ರಕಾರ ಜಗದಾದ್ಯಂತ ಕನಿಷ್ಠ ಒಂದು ಲಕ್ಷ ಮನುಷ್ಯರು ಪ್ರತಿ ವರ್ಷ ವಿಷ ಪ್ರಾಣಿಗಳ ಕಡಿತದಿಂದ ಪ್ರಾಣ ಕಳೆದು ಕೊಳ್ಳುತ್ತಿದ್ದಾರೆ.

ಈ ವರೆಗೆ ತಿಳಿದಿರುವ ಒಂದು ಲಕ್ಷ ವಿಷ ಪ್ರಾಣಿ ಪ್ರಭೇದಗಳ ಬೇರೆ ಬೇರೆ ವರ್ಗಗಳ ವಿವರ ಹೀಗಿದೆ:

1) ಸರ್ಪಗಳು ಮತ್ತು ಹಲ್ಲಿಗಳು : 1000 ಪ್ರಭೇದಗಳು




2) ಚೇಳುಗಳು : 1000
3) ಶತಪದಿಗಳು : 2000
4) ಸಾಗರ ಶಂಬುಕಗಳು : 5000
5) ಜೆಲ್ಲಿ ಮೀನು, ಹವಳ ಇತ್ಯಾದಿ : 6000
6) ಜೇಡಗಳು : 20,000
7) ಕೀಟಗಳು : 62,000
8) ಮತ್ಸ್ಯ ಕಪ್ಪೆ ಉಣ್ಣೆ ಇತ್ಯಾದಿ : 2000
9) ಇತರೆ : 1000 ಪ್ರಭೇದಗಳು

■ ಎನ್. ವಾಸುದೇವ್